**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ**

**ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗರಸ್ತೆ, ಕೆ.ಆರ್. ಸರ್ಕಲ್, ಬೆಂಗಳೂರು-560001**

ಸಂಖ್ಯೆ: ಸಶಿಅ/ಶಿಹಕೋ/ಸಿ.ಬಿ.ಎಸ್.ಸಿ/30/ 2013-14 ದಿನಾಂಕ:19-05-2016

**ಸುತ್ತೋಲೆ**

ವಿಷಯ:-ಶಿಕ್ಷಣ ಹಕ್ಕು ಕಾಯ್ದೆ ಅಡಿ ಪ್ರವೇಶ ಪಡೆದ ಮಕ್ಕಳಿಂದ ಶುಲ್ಕ ವಸೂಲಾತಿ ನಿಷೇಧ.

ಉಲ್ಲೇಖ:-1.ಈ ಕಾರ್ಯಾಲಯದ ಪತ್ರದ ಸಂಖ್ಯೆ: ಸಶಿಅ/ಶಿಹಕೋ/10/2012-13 ದಿನಾಂಕ:06-02-2013.

2.ಈಕಾರ್ಯಾಲಯದ ಪತ್ರದ ಸಂಖ್ಯೆ:ಸಶಿಅ/ಶಿ.ಹ.ಕೋ/ಸಿ.ಬಿ.ಎಸ್.ಇ/30/2013-14 ದಿನಾಂಕ:18-11--2013.

3.ಈಕಾರ್ಯಾಲಯದ ಪತ್ರದ ಸಂಖ್ಯೆ:ಸಿ(7)2ಪ್ರಾ.ಶಿ.ದಾಖಲಾತಿ64/2013-14 ದಿನಾಂಕ:07-01-2014.

4.ಈ ಕಾರ್ಯಾಲಯದ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ: 13-3-2014

----

ಉಲ್ಲೇಖದಲ್ಲಿನ ಸುತ್ತೋಲೆಗಳ ಕಡೆ ತಮ್ಮ ಗಮನ ಸೆಳೆಯಲಾಗಿದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ 2009ರ ಸೆಕ್ಷನ್ 2(ಬಿ) ಪ್ರಕಾರ ಪ್ರತಿ ಶಾಲೆಯಲ್ಲಿ ಪೋಷಕರಿಂದ ಸಂಗ್ರಹಿಸುವ ಶುಲ್ಕದ ವಿವರವನ್ನು ಸಾರ್ವಜನಿಕರ ಮಾಹಿತಿಗಾಗಿ ಅಧಿಸೂಚಿಸುವುದು ಕಡ್ಡಾಯವಾಗಿದೆ. ಸುತ್ತೋಲೆ ಸಂಖ್ಯೆ 1 ಮತ್ತು 2 ರಲ್ಲಿ ಈ ಬಗ್ಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ.ಉಲ್ಲೇಖ 2 ಮತ್ತು 3 ರಲ್ಲಿನ ಸುತ್ತೋಲೆಗಳಲ್ಲಿ ಶಿಕ್ಷಣ ಹಕ್ಕು ಕಾಯ್ದೆಅನ್ವಯ ಪ್ರವೇಶ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಶಿಕ್ಷಣ ಹಕ್ಕು ಕಾಯ್ದೆಯ ಸೆಕ್ಷನ 2(ಬಿ) ಅನ್ವಯ ಪೋಷಕರಿಂದ ಯಾವುದೇ ರೀತಿಯ ಕ್ಯಾಪಿಟೇಷನ್ ಶುಲ್ಕ ಸಂಗ್ರಹವನ್ನು ನಿಷೇಧಿಸಲಾಗಿದೆ. ಅಲ್ಲದೆ ಶಿಕ್ಷಣ ಹಕ್ಕು ಕಾಯ್ದೆಯ ಸೆಕ್ಷನ್ 12(1)(ಸಿ) ಅಡಿಯಲ್ಲಿ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಶಾಲೆಗಳಲ್ಲಿ ಪ್ರವೇಶ ಪಡೆದ ಮಕ್ಕಳಿಂದ ವಿವಿಧರೀತಿಯ ಶುಲ್ಕ ವಸೂಲು ಮಾಡುತ್ತಿರುವ ಬಗ್ಗೆ ಪೋಷಕರಿಂದ ದೂರುಗಳು ಬರುತ್ತಿವೆ. ಅಲ್ಲದೆ ದಿನಪತ್ರಿಕೆ ಮತ್ತು ದೃಶ್ಯಮಾಧ್ಯಮಗಳಲ್ಲಿ ಈ ಬಗ್ಗೆ ಸುದ್ದಿ ಪ್ರಕಟವಾಗುತ್ತಿರುವುದು ಈ ಆಯುಕ್ತಾಲಯದ ಗಮನಕ್ಕೆ ಬಂದಿರುತ್ತದೆ. ಅಲ್ಲದೆ, ಕೆಲವು ಸಂಘಟನೆಗಳು ಈ ಬಗ್ಗೆ ಮನವಿ ಸಲ್ಲಿಸಿವೆ.

ಶಿಕ್ಷಣ ಹಕ್ಕು ನಿಯಮಗಳು 2012 ರ ನಿಯಮ 7(2)ರಲ್ಲಿ ನಮೂದಿಸಿರುವ ಸೌಲಭ್ಯಗಳಿಗೆ ಶಿಕ್ಷಣ ಹಕ್ಕು ಕಾಯಿದೆ ಅಡಿ ಪ್ರವೇಶ ಪಡೆದ ಮಕ್ಕಳಿಗೆ ಶುಲ್ಕ ವಸೂಲು ಮಾಡುವಂತಿಲ್ಲ. ಅಲ್ಲದೇ ಮಗುವಿನ ಶಿಕ್ಷಣಕ್ಕೆ ತೊಂದರೆಯಾಗುವ ಯಾವುದೇ ರೀತಿಯ ಹಣಕಾಸಿನ ಅಡಚಣೆಯನ್ನು ಉಂಟು ಮಾಡುವುದು ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 3(2)ರ ಉಲ್ಲಂಘನೆಯಾಗುತ್ತದೆ.

ಉಚಿತ ಮತ್ತುಕಡ್ಡಾಯ ಶಿಕ್ಷಣಕ್ಕಾಗಿ ಕರ್ನಾಟಕ ಮಕ್ಕಳ ಹಕ್ಕುಗಳ ನಿಯಮಗಳು 2012ರ ನಿಯಮ 7 ರಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ ಸೆಕ್ಷನ್ 12(1)(ಸಿ) ಅಡಿ ಪ್ರವೇಶ ಪಡೆದ ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತುದುರ್ಬಲ ವರ್ಗದ ಮಕ್ಕಳಿಗೆ ಪಠ್ಯಪುಸ್ತಕ, ಸಮವಸ್ತ್ರ, ಗ್ರಂಥಾಲಯ, ಐಸಿಟಿ ಸೌಲಭ್ಯ, ಸಹಪಠ್ಯ ಚಟುವಟಿಕೆಗಳು ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಮುಕ್ತವಾಗಿ ಮತ್ತು ಉಚಿತವಾಗಿ

ಯಾವುದೇ ರೀತಿಯ ತಾರತಮ್ಯವಿಲ್ಲದಂತೆ ಭಾಗವಹಿಸಲು ಅವಕಾಶ ಮಾಡಿಕೊಡಬೇಕಾಗಿದೆ. ಉಚಿತ ಶಿಕ್ಷಣದ ವ್ಯಾಖ್ಯಾನದಲ್ಲಿ ಈ ಅಂಶವನ್ನು ಪರಿಗಣಿಸಲಾಗಿದೆ.

ಕೆಲವು ಶಾಲೆಗಳಲ್ಲಿ ಪಠ್ಯಪುಸ್ತಕ, ಸಮವಸ್ತ್ರದ ವೆಚ್ಚಕ್ಕಾಗಿ ಪೋಷಕರಿಂದ ಮುಂಗಡವಾಗಿ ಹಣ ಪಡೆದು ಸರ್ಕಾರದಿಂದ ಹಣ ಬಂದ ನಂತರ ಸಂಬಂಧಿಸಿದ ಪೋಷಕರಿಗೆ ಮರುಪಾವತಿಸುವುದಾಗಿ ಕೆಲವು ಆಡಳಿತ ಮಂಡಳಿಗಳು ತಿಳಿಸಿರುವುದಾಗಿ ದೂರವಾಣಿ ಮೂಲಕ ಈ ಕಾರ್ಯಾಲಯಕ್ಕೆ ದೂರುಗಳು ಬಂದಿರುತ್ತವೆ. ಶುಲ್ಕ ಸಂಗ್ರಹಿಸಿ ರಸೀತಿ ನೀಡದಿರುವ ಬಗ್ಗೆಯೂ ಸಹ ದೂರುಗಳು ಬರುತ್ತಿರುತ್ತವೆ.

ಶಿಕ್ಷಣ ಹಕ್ಕು ನಿಯಮಗಳು 2012ರ ನಿಯಮ 7(2)ರಲ್ಲಿ ನಮೂದಿಸಿರುವ ಸೌಲಭ್ಯಗಳಿಗೆ ಶುಲ್ಕ ವಸೂಲು ಮಾಡುವಂತಿಲ್ಲ. ಆದಕಾರಣ ಆಡಳಿತ ಮಂಡಳಿಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು ಶಿಕ್ಷಣ ಹಕ್ಕು ಕಾಯ್ದೆ ಮತ್ತು ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

**ಇವರಿಗೆ ಕ್ರಮಕ್ಕಾಗಿ :**

ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಢಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.

ರಾಜ್ಯದ ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸಂಬಂಧಿಸಿದ ಜಿಲ್ಲಾಉಪನಿರ್ದೇಶಕರ ಮೂಲಕ

**ಇವರಿಗೆ ಮಾಹಿತಿಗಾಗಿ :**

1.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ,ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಗೌರವಗಳೊಂದಿಗೆ ಸಲ್ಲಿಸಿದೆ.

2.ರಾಜ್ಯಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಮತ್ತುರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು.

3.ಅಪರ ಆಯುಕ್ತರು, ಧಾರವಾಡ ಮತ್ತುಗುಲ್ಬರ್ಗಾ,

4.ನಿರ್ದೇಶಕರು,ಪ್ರಾಥಮಿಕ ಶಿಕ್ಷಣ / ಪ್ರೌಢಶಿಕ್ಷಣ / ಸಂಶೋಧನೆ ಮತ್ತುತರಬೇತಿ ನಿರ್ದೇಶಕರು, ಅಪರಆಯುಕ್ತಾಲಯ, ಧಾರವಾಡ ಮತ್ತು ಗುಲ್ಬರ್ಗಾ

5.ರಾಜ್ಯದಎಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್.

6.ರಾಜ್ಯದಎಲ್ಲಾ ಜಿಲ್ಲೆಗಳ ಜಿಲ್ಲಾಯೋಜನಾ ಸಮನ್ವಯಾಧಿಕಾರಿಗಳು, ಸರ್ವಶಿಕ್ಷಣ ಅಭಿಯಾನ.

7.ಕಾರ್ಯದರ್ಶಿಗಳು, ಕರ್ನಾಟಕರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾಆಯೋಗ (ಕೆ.ಎಸ್.ಸಿ.ಪಿ.ಸಿ.ಆರ್), 4ನೇಮಹಡಿ, ಕೃಷಿ ಭವನ, ನೃಪತುಂಗರಸ್ತೆ, ರಾಣಿಚೆನ್ನಮ್ಮ ಸರ್ಕಲ್, ಬೆಂಗಳೂರು-560001.

8.ಇ-ಆಡಳಿತ ಶಾಖೆಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುದಕ್ಕಾಗಿ.

9.ಕಛೇರಿ ಪ್ರತಿ.